ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .
ಸಿಸಿ. 286/2015

| | | |
|---|---|---|
| ಸಾಕ್ಷಿದಾರರು ಹೆಸರು | : ನಾಗಣ್ಣ | ದಿನಾಂಕಃ 25.07.2024ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : ಶಿವನಂಜಪ್ಪ | |
| ವಯಸ್ಸು | : 35 ವರ್ಷ | |
| ಉದ್ಯೋಗ | : ವ್ಯವಸಾಯ | **CW-2** |
| ವಾಸಸ್ಥಳ | : ಹೆಗ್ಗೋಠಾರ ಗ್ರಾಮ. | **PW-2** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಆರೋಪಿ ಗೊತ್ತು. ಆರೋಪಿ ಲಾರಿ ಚಾಲಕರಾಗಿರುತ್ತಾರೆ. ಮೃತ ಸುಕುಮಾರ್ ಮತ್ತು ಮಲ್ಲು ಅಃ ಚೆನ್ನಮಲ್ಲು ಎಂಬುವವರು ಗೊತ್ತು. ಸುಕುಮಾರ್ ಮತ್ತು ಮಲ್ಲುರವರು ಈಗ ಹತ್ತು ವರ್ಷಗಳ ಹಿಂದೆ ರಸ್ತೆ ಅಪಘಾತದಲ್ಲಿ ಮೃತರಾಗಿರುತ್ತಾರೆ. ಈಗ ಹತ್ತು ವರ್ಷಗಳ ಹಿಂದೆ ನಾನು ಮತ್ತು ಚಾಸಾ1ರವರು ನಮ್ಮ ನಮ್ಮ ದ್ವಿಚಕ್ರ ವಾಹನಗಳಲ್ಲಿ ಚಾಮರಾಜನಗರದಿಂದ ನಮ್ಮ ಊರಿಗೆ ಹೋಗುತ್ತಿದ್ದಾಗ ರಾತ್ರಿ 7–7.30ರ ಸಮಯದಲ್ಲಿ ಮೃತ ಸುಕುಮಾರ್ ರವರು ಚಾಸಾ1ರವರಿಗೆ ಫೋನ್ ಮಾಡಿ ತಾನೂ ಸಹ ಮಲ್ಲು ಅಃ ಚೆನ್ನಮಲ್ಲುರವರಿಗೆ ಹುಷಾರಿಲ್ಲದೇ ವೈದ್ಯರಿಗೆ ತೋರಿಸಲು ಕರೆದುಕೊಂಡು ಬಂದಿದ್ದೆ. ಆಸ್ಪತ್ರೆಗೆ ತೋರಿಸಿ ವಾಪಸ್ಸು ಊರಿಗೆ ಬರುವುದಾಗಿ ಮತ್ತು ತಾವೆಲ್ಲರೂ ಜೊತೆಗೆ ಹೋಗೋಣ ಎಂದು ತಿಳಿಸಿದರು. ನಂತರ ನಾನು ಮತ್ತು ಚಾಸಾ1ರವರು ಚಾಮರಾಜನಗರದ ಎಲ್ ಐ ಸಿ ಕಛೇರಿ ಬಳಿ ಕಾಯುತ್ತಿದ್ದು, ಅಲ್ಲಿಗೆ ಸುಕುಮಾರ್ ಮತ್ತು ಮಲ್ಲು ಅಃ ಚೆನ್ನಮಲ್ಲುರವರು ಬಜಾಜ್ ಬೈಕಿನಲ್ಲಿ ಬಂದಿರುತ್ತಾರೆ. ನಂತರ ನಾವೆಲ್ಲರೂ ಅಲ್ಲಿಂದ ಸಂಜೆ 7.45ರ ಸುಮಾರಿಗೆ ಊರಿನ ಕಡೆಗೆ ಹೊರಟಿದ್ದು, ಸುಕುಮಾರ್ ಮತ್ತು ಮಲ್ಲುರವರು ಒಂದೇ ಬೈಕಿನಲ್ಲಿ ಮುಂದೆ ಹೋಗುತ್ತಿದ್ದು, ಸುಕುಮಾರ್ ರವರು ಬೈಕ್ ಚಾಲನೆ ಮಾಡುತ್ತಿದ್ದು, ನಾವು ಹಿಂದೆ ಹೋಗುತ್ತಿದ್ದೆವು. ರಾತ್ರಿ ಸುಮಾರು 8.30ರ ಸಮಯದಲ್ಲಿ ಮರಿಯಾಲದ ಬೋರೆ ಬಳಿ ನಮ್ಮ ಬೈಕುಗಳ ಮುಂದೆ ಹೋಗುತ್ತಿದ್ದ ಲಾರಿಯೊಂದು ಯಾವುದೇ ಸೂಚನೆ ನೀಡದೇ ಏಕಾಏಕಿ ಬಲಗಡೆಗೆ ತಿರುಗಿದ್ದರಿಂದ ಸುಕುಮಾರ್ ಚಲಾಯಿಸುತ್ತಿದ್ದ ಬೈಕು ಸದರಿ ಲಾರಿಗೆ ಡಿಕ್ಕಿ ಹೊಡೆದು ಸುಕುಮಾರ ಮತ್ತು ಮಲ್ಲು ಅಃ ಚೆನ್ನಮಲ್ಲುರವರು ಕೆಳಕ್ಕೆ ಬಿದ್ದಿರುತ್ತಾರೆ. ನಂತರ ನಾವು ಬೈಕ್ ನಿಲ್ಲಿಸಿ ಹೋಗಿ ನೋಡಿದಾಗ ಅವರಿಬ್ಬರಿಗೂ ತಲೆ ಮತ್ತು ಕೈಕಾಲುಗಳಿಗೆ ಗಾಯಗಳಾಗಿ ರಕ್ತ ಬಂದಿದ್ದು, ನಾವು ನೋಡಿದಾಗ ಅದಾಗಲೇ ಅವರಿಬ್ಬರೂ ಮೃತಪಟ್ಟಿದ್ದರು.

ಸದರಿ ಲಾರಿಯ ಚಾಲಕ ಲಾರಿಯನ್ನು ಮುಂದೆ ತೆಗೆದುಕೊಂಡು ಹೋಗಿ ನಿಲ್ಲಿಸಿರುತ್ತಾರೆ. ನಾವು ಗಾಬರಿಯಲ್ಲಿ ಇದ್ದುದರಿಂದ ಲಾರಿ ಚಾಲಕನ ಬಗ್ಗೆ ವಿಚಾರಿಸಲಿಲ್ಲ. ಸದರಿ ಲಾರಿಯ ನಂಬರ್ ಈಗ ನೆನಪಿಲ್ಲಾ. ಸದರಿ ಲಾರಿ ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುತ್ತದೆ. ಸಾಕ್ಷಿ ನಿಪಿಃ3 ರಿಂದ 6 ಫೋಟೋಗಳನ್ನು ನೋಡಿ ಅದರಲ್ಲಿ ಕಂಡುಬರುವ ಲಾರಿಯೇ ಆ ದಿನ ಅಪಘಾತಕ್ಕೆ ಕಾರಣವಾದ ವಾಹನ ಎಂದು ನುಡಿಯುತ್ತಾರೆ. ಸುಕುಮಾರ್ ರವರು ಚಲಾಯಿಸುತ್ತಿದ್ದ ಬೈಕನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಅಪಘಾತಕ್ಕೆ ಒಳಗಾದ ಮೋಟಾರ್ ಬೈಕನ್ನು ನ್ಯಾಯಾಲಯಕ್ಕೆ ಹಾಜರು ಮಾಡದೇ ಇರುವುದು ಕಂಡುಬಂದಿದ್ದು, ಮುಂದುವರಿದು ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.